ಈ) ದಸರಾ ವಸ್ತು ಪ್ರದರ್ಶನದ ಪ್ರವೇಶ ಧನವಾಗಿ ರೂ. ೬ ೩೭ ೬೨೨–೦೦ ರೂಪಾಯಿಗಳು ಬಂದಿರುತ್ತದೆ.

ಸರ್ಕಾರಿ ಮಳಿಗೆಗಳಿಂದ ಮತ್ತು ಇತರೆ ಮಳಿಗೆಗಳು ಹಾಗೂ ಖಾಲಿ ಜಾಗದಿಂದ ೧೪,೯೯,೨೭೮–೦೦ ರೂಪಾಯಿಗಳು ವಸೂಲಾಗಿದೆ.

ಉತ್ಸವ ಸಂಗೀತ ಕಾರ್ಯಕ್ರಮಗಳ ಪ್ರವೇಶ ಧನದಿಂದ ೨೨,೪೯೦–೦೦ ರೂಪಾಯಿಗಳು ಬಂದಿರುತ್ತದೆ.

ರಾಜ್ಯದಲ್ಲಿರುವ ಆಸ್ಪತ್ರೆಗಳ ಬಗ್ಗೆ

೩೩. **ಶ್ರೀ ವೇದಾಂತ ಹೆಮ್ಮಿಗೆ** (ಕೃಷ್ಣರಾಜ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರ್ಕಾರಿ ಆಡಳಿತದಲ್ಲಿರುವ ಒಳ ರೋಗಿಗಳ ದೊಡ್ಡ ಆಸ್ಪತ್ರೆಗಳು ಎಷ್ಟು ಹಾಗೂ ಹಳ್ಳಿಗಾಡಿನಲ್ಲಿರುವ ಆಸ್ಪತ್ರೆಗಳು ಎಷ್ಟು ?

ಆ) ಎಷ್ಟು ಒಳ ರೋಗಿಗಳ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸಾ ಘಟಕಗಳಿವೆ ಹಾಗೂ ಆ ಪೈಕಿ ಎಷ್ಟು ಕೆಲಸ ಮಾಡುತ್ತಿವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ದೊಡ್ಡ ಆಸ್ಪತ್ರೆಗಳು (ಭೋದನಾ ಆಸ್ಪತ್ರೆಗಳು ಸೇರಿದಂತೆ)	...	೫೦
ಉಪವಿಭಾಗ, ತಾಲ್ಲೂಕು ಮತ್ತು ಅದಕ್ಕಿಂತ ಕೆಳಮಟ್ಟದ ಆಸ್ಪತ್ರೆಗಳು	...	೪೪
ಪ್ರಾಥಮಿಕ ಆರೋಗ್ಯ ಕೇಂದ್ರಗಳು	...	೪೬೫
ಪ್ರಾಥಮಿಕ ಆರೋಗ್ಯ ಘಟಕಗಳು	...	೧೩೧೦

ಅ) ದೊಡ್ಡ ಆಸ್ಪತ್ರೆಗಳ ಪೈಕಿ ೪೪ ಆಸ್ಪತ್ರೆಗಳಲ್ಲಿ ಮತ್ತು ಉಪವಿಭಾಗ, ತಾಲ್ಲೂಕು ಮತ್ತು ಅದಕ್ಕಿಂತ ಕೆಳಮಟ್ಟದ ಎಲ್ಲಾ ೪೪ ಆಸ್ಪತ್ರೆಗಳಲ್ಲೂ ಶಸ್ತ್ರ ಚಿಕಿತ್ಸಾ ಘಟಕಗಳಿವೆ. ಈ ಎಲ್ಲಾ ಶಸ್ತ್ರ ಚಿಕಿತ್ಸಾ ಘಟಕಗಳೂ ಕಾರ್ಯ ನಿರ್ವಹಿಸುತ್ತಿವೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಶಸ್ತ್ರ ಚಿಕಿತ್ಸಾ ಘಟಕಗಳಿರುವುದಿಲ್ಲ.

ರಾಜ್ಯದಲ್ಲಿ ಬರಗಾಲ ಪರಿಹಾರ ಕಾರ್ಯಕ್ಕೆ ಪಡೆದಿರುವ ಧನ ಸಹಾಯದ ಬಗ್ಗೆ

೩೪. **ಶ್ರೀ ಜಿ. ರಾಜಂಗೌಡ** (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದವರು ೧೯೮೫–೮೪ ರಿಂದ ಬರಗಾಲ ಪರಿಹಾರಕ್ಕೆ ಕೇಂದ್ರದಿಂದ ಪಡೆದಿರುವ ನೆರವು ಎಷ್ಟು ? ಅದರಲ್ಲಿ ವೆಚ್ಚ ಮಾಡಲಾದ ಹಣವೆಷ್ಟು ?

ಆ) ರಾಜ್ಯದಲ್ಲಿ ನಾಲ್ಕು ವರ್ಷಗಳ ಸತತ ಬರಗಾಲದಿಂದ ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಗಳ ಉತ್ಪಾದನೆಗೆ ಭಾರೀ ಪ್ರಮಾಣದಲ್ಲಿ ಧಕ್ಕೆಯಾಗಿರುವುದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಉಂಟಾಗಿರುವ ಪರಿಣಾಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೨೭.೨೫ ಕೋಟಿ ರೂಪಾಯಿಗಳು. ಪೂರ್ತಿ ವೆಚ್ಚ ಮಾಡಲಾಗಿದೆ.

ಆ) ಒಂದು ಅಂದಾಜಿನ ಪ್ರಕಾರ ಕೃಷಿ ಉತ್ಪಾದನೆಯಲ್ಲಿ ೧೧೯೮ ಕೋಟಿ ರೂಪಾಯಿಗಳು ಮತ್ತು ಕೈಗಾರಿಕಾ ಉತ್ಪಾದನೆಯಲ್ಲಿ ೧೬೦೫ ಕೋಟಿ ರೂಪಾಯಿಗಳಷ್ಟು ನಷ್ಟವುಂಟಾಗಿದೆ ಇದರಿಂದಾಗಿ ಒಳಒ ಕೋಟಿ ರೂಪಾಯಿಗಳಷ್ಟು ರಾಜಸ್ವ ನಷ್ಟವುಂಟಾಗಿದೆ.

ಮಾನ್ಯ ಮುಖ್ಯ ಮಂತ್ರಿಗಳ ಪ್ರವಾಸ ಭತ್ಯೆಯ ಬಗ್ಗೆ

೫೯೫. ಶ್ರೀ ಎನ್. ಎಂ. ಅಡ್ಯಂತಾಯ್ಯ (ಸುರತ್ಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೦-೧-೧೯೮೫ ರಿಂದ ೩೧-೧೨-೧೯೮೫ರ ಪರೆಗೆ ರಾಜ್ಯದ ಮುಖ್ಯ ಮಂತ್ರಿಗಳು ಪಡೆದ ಪ್ರವಾಸ ಭತ್ಯೆ ಎಷ್ಟು ?

ಆ) ಈ ಅವಧಿಯಲ್ಲಿ ಎಷ್ಟು ಬಾರಿ ರಾಜ್ಯದಲ್ಲಿ ಪ್ರವಾಸ ಕೈಗೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ರೂ. ೧,೪೩,೬೪೨-೫೦ ಪೈಸೆ.

ಆ) ೩೩ ಬಾರಿ.

ರಾಜ್ಯದಲ್ಲಿ ಕಂಟುಂಬ ನ್ಯಾಯಾಲಯಗಳನ್ನು ನಿರ್ಮಿಸುವ ಬಗ್ಗೆ

೧೫೯ (ಬಿ) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ, ಆಹಾರ, ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಂಟುಂಬ ನ್ಯಾಯಾಲಯಂವನ್ನು ರಾಜ್ಯ ಸರ್ಕಾರದವರು ಆರಂಭಿಸಲು ನಿರ್ಧರಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಎಂದಿನಿಂದ ಮತ್ತು ಯಾವ ಸ್ಥಳಗಳಲ್ಲಿ ಆರಂಭಿಸಲಾಗುವುದು ?

ಇ) ಈ ನ್ಯಾಯಾಲಯದ ರೂಪುರೇಷೆಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಬೆಂಗಳೂರಿನಲ್ಲಿ ಸಧ್ಯದಲ್ಲೇ ಆರಂಭಿಸಲಾಗುವುದು.

ಇ) ವಿವಾಹ ಮತ್ತು ಕುಟುಂಬದ ವ್ಯವಹಾರಗಳು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಪಟ್ಟ ವಿವಾದಗಳನ್ನು ರಾಜಿಯ ಮೂಲಕ ಶೀಘ್ರವಾಗಿ ಇತ್ಯರ್ಥಗೊಳಿಸುವುದು.

ಕೇಂದ್ರ ಸರ್ಕಾರವು ವಾರ್ತಾ ವಿಭಾಗವನ್ನು ಮುಚ್ಚುತ್ತಿರುವ ಬಗ್ಗೆ

೬೯೫. ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ (ಅಥಣಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿನಲ್ಲಿನ ಕೇಂದ್ರ ಸರ್ಕಾರದ ವಾರ್ತಾ ಯುವಜನ ಇಲಾಖೆಯ ವಾರ್ತಾ ವಿಭಾಗವನ್ನು ಮುಚ್ಚುತ್ತಿರುವುದು ನಿಜವೇ ?

ಆ) ಇದರಿಂದ ಆ ವಿಭಾಗದ ಜನರಿಗೆ ಹಾಗೂ ಪತ್ರಿಕೆಗಳಿಗೆ ದೊಳಕುತ್ತಿದ್ದ ಸೌಲಭ್ಯ ವಂಚಿತವಾಗುವುದಿಲ್ಲವೇ ?

ಇ) ರಾಜ್ಯ ಸರ್ಕಾರದವರು ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿದ್ದಾರೆಯೇ?